# ಕರ್ನಾಟಕ ಸರ್ಕಾರದ ನಡವಳಿಗಳು

178

**ವಿಷಯ:** ವಿಕಲಚೇತನರ ವಿದ್ಯಾರ್ಥಿ ವೇತನ ದರವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ. ಮಮಇ 404 ಪಿಹೆಚ್‌ಪಿ 2001, ದಿನಾಂಕ: 4.9.2001.

2) ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ. ವಿಹಿನಾಸಇ/ಯೋಜನೆ/ವಿ.ವೇತನ/07/2013-14/1423, ದಿನಾಂಕ: 26.7.2013.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ದರವನ್ನು ನಿಗಧಿಪಡಿಸಿ ಆದೇಶಿಸಿದೆ.

ಮೇಲೆ ಓದಲಾದ (2) ರ ಪತ್ರದಲ್ಲಿ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ರವರು ವಿಕಲಚೇತನರಿಗೆ ಹಾಲಿ ನೀಡುತ್ತಿರುವ ವಿದ್ಯಾರ್ಥಿ ವೇತನವು 12 ವರ್ಷಗಳಿಂದ ಪರಿಷ್ಕರಣೆ ಆಗಿರುವುದಿಲ್ಲವಾದ್ದರಿಂದ, ವಿದ್ಯಾರ್ಥಿ ವೇತನ ದರವನ್ನು ಪರಿಷ್ಕರಿಸುವುದು ಅತ್ಯವಶ್ಯಕವಾಗಿರುತ್ತದೆ. ವಿದ್ಯಾರ್ಥಿಗಳು ಪಾವತಿಸುವ ಶಾಲಾ ಶುಲ್ಕ, ಪರೀಕ್ಷಾ ಶುಲ್ಕ ಹೆಚ್ಚಾಗಿರುವುದರಿಂದ ಹಾಲಿ ನೀಡುತ್ತಿರುವ ವಿದ್ಯಾರ್ಥಿ ವೇತನದಿಂದ ಶಿಕ್ಷಣವನ್ನು ಮುಂದುವರೆಸುವುದು ಕಷ್ಟಕರವಾಗಿರುವುದರಿಂದ, ವಿಕಲಚೇತನರಿಗೆ ಶಿಕ್ಷಣವನ್ನು ಮುಂದುವರಿಸಲು ಪ್ರೋತ್ಸಾಹ ನೀಡುವ ಸಲುವಾಗಿ ವಿದ್ಯಾರ್ಥಿ ವೇತನವನ್ನು ಕೆಳಕಂಡಂತೆ ಪರಿಷ್ಕರಿಸಲು ಶಿಫಾರಸ್ಸು ಮಾಡಿರುತ್ತಾರೆ. ಹಾಗೂ ಇದಕ್ಕೆ ತಗಲುವ ವೆಚ್ಚ ~~ರೂ.595.00 ಲಕ್ಷಗಳನ್ನು~~ ಹಾಲಿ 2013-14 ನೇ ಸಾಲಿಗೆ ನಿಗಧಿಪಡಿಸಲಾದ ಲೆಕ್ಕಶೀರ್ಷಿಕೆ "2235-02-101-0-05" ಯೋಜನೆಯಡಿ ರೂ.10.00 ಲಕ್ಷಗಳನ್ನು ಹಾಗೂ ಯೋಜನೇತರದಡಿ ರೂ.250.00 ಲಕ್ಷಗಳನ್ನು ಒಟ್ಟು ರೂ.260.00 ಲಕ್ಷಗಳನ್ನು ಹೊರತುಪಡಿಸಿ ಉಳಿದ ರೂ.335.00 ಲಕ್ಷಗಳ ಹೆಚ್ಚುವರಿ ಆಯವ್ಯಯ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

| ಕ್ರ. ಸಂ. | ತರಗತಿವಾರು | ಹಾಲಿ ನೀಡುತ್ತಿರುವ ವಿದ್ಯಾರ್ಥಿ ವೇತನ ಮಾಹೆಯಾನ | ಶಿಫಾರಸ್ಸು ಮಾಡಲಾದ ಪರಿಷ್ಕೃತ ದರ | ಪಡೆಯಲಿರುವ ವಿದ್ಯಾರ್ಥಿಗಳ ಅಂದಾಜು ಸಂಖ್ಯೆ | ವಾರ್ಷಿಕ ಒಟ್ಟು ಮಾಹೆಗಳಲ್ಲಿ ವಿದ್ಯಾರ್ಥಿ ವೇತನ | ಬೇಕಾಗುವ ಒಟ್ಟು ಮೊತ್ತ (ಲಕ್ಷಗಳಲ್ಲಿ) |
|---|---|---|---|---|---|---|
| 1 | 1 ರಿಂದ 5 | 50/- | 100/- | 13000 | 10 ಮಾಹೆ | 130.00 |
| 2 | 6 ರಿಂದ 10 | 100/- | 200/- | 9500 | 10 ಮಾಹೆ | 190.00 |
| 3 | ಪಿ.ಯು.ಸಿ. | 150/- | 300/- | 4000 | 10 ಮಾಹೆ | 120.00 |
| 4 | ಬಿ.ಎ./ಬಿ.ಎಸ್ಸಿ/ಬಿ.ಕಾಂ/ಇತರೆ ಪದವೀಧರರು ಹಾಗೂ ಟಿ.ಸಿ.ಹೆಚ್/ ತತ್ಸಮಾನ | 200/- | 400/- | 2500 | 10 ಮಾಹೆ | 100.00 |
| 5 | ಬಿ.ಇ/ಬಿ.ಟೆಕ್/ಎಂ.ಬಿ.ಬಿ.ಎಸ್. ಎಲ್‌ಎಲ್‌ಬಿ/ಡಿಪ್ಲೋಮೋ ಇನ್ ಫ್ಯಾಬ್ರಿಕೇಷನ್ ಇಂಜಿನೀಯರಿಂಗ್ ಇನ್ ಪ್ಲಾಂಟ್ ಟ್ರೈನಿಂಗ್ | 250/- | 500/- | 500 | 10 ಮಾಹೆ | 25.00 |
| 6 | ಎಂ.ಎ/ಎಂ.ಎಸ್ಸಿ/ ಎಲ್‌ಎಲ್‌ಬಿ ಹಾಗೂ ತತ್ಸಮಾನ | 300/- | 600/- | 500 | 10 ಮಾಹೆ | 30.00 |
| | | | | 30,000 | ಒಟ್ಟು | 595.00 |
| (ರೂ.ಐದು ನೂರ ತೊಂಬತ್ತೈದು ಲಕ್ಷಗಳು ಮಾತ್ರ) | | | | | | |

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ. ಮಮಇ 293 ಪಿಹೆಚ್‌ಪಿ 2013, ಬೆಂಗಳೂರು, ದಿನಾಂಕ: 1.2.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ವಿಕಲಚೇತನರಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನ ದರವನ್ನು ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-0-05 ಯೋಜನೇತರದಡಿ ಒದಗಿಸಿರುವ ಅನುದಾನದಡಿಯಲ್ಲಿಯೇ ಭರಿಸತಕ್ಕದ್ದು.

| ಕ್ರ ಸಂ. | ತರಗತಿವಾರು | ಹಾಲಿ ನೀಡುತ್ತಿರುವ ವಿದ್ಯಾರ್ಥಿ ವೇತನ ಮಾಹೆಯಾನ | ಪರಿಷ್ಕೃತ ವಿದ್ಯಾರ್ಥಿ ವೇತನ |
|---|---|---|---|
| 1 | 1 ರಿಂದ 5 | 50/- | 100/- |
| 2 | 6 ರಿಂದ 10 | 100/- | 200/- |
| 3 | ಪಿ.ಯು.ಸಿ. | 150/- | 300/- |
| 4 | ಬಿ.ಎ./ಬಿ.ಎಸ್ಸಿ/ಬಿಕಾಂ/ ಇತರೆ ಪದವೀಧರರು ಹಾಗೂ ಟಿ.ಸಿ.ಹೆಚ್./ ತತ್ಸಮಾನ | 200/- | 400/- |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 843 ವೆಚ್ಚ-3/2013, ದಿನಾಂಕ: 9.1.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಂಖ್ಯೆ ..........
ದಿನಾಂಕ 4/2/2014

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಉಪ ನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-3), ವಿಧಾನಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.